STD
16-3-22

ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು	:	ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	1992
ಉತ್ತರಿಸಬೇಕಾದ ದಿನಾಂಕ	:	16.03.2022
ಉತ್ತರಿಸಬೇಕಾದ ಸಚಿವರು	:	ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಗ್ರಾಮೀಣ ಪ್ರದೇಶಗಳಲ್ಲಿ ಒದಗಿಸುವ ವಸತಿ ಯೋಜನೆಗಳು ಯಾವುವು ;	ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಸತಿ ಸೌಕರ್ಯ ಕಲ್ಪಿಸಲು ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. **ರಾಜ್ಯ ಪುರಸ್ಕೃತ ಯೋಜನೆಗಳು :-** 1. ಬಸವ ವಸತಿ ಯೋಜನೆ 2. ಡಾ. ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ) 3. ದೇವರಾಜು ಅರಸು ವಸತಿ ಯೋಜನೆ (ಗ್ರಾಮೀಣ) **ಕೇಂದ್ರ ಪುರಸ್ಕೃತ ಯೋಜನೆ :-** 1. ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)
ಆ)	ಈ ಯೋಜನೆಗಳಲ್ಲಿ ಪ್ರತಿ ಫಲಾನುಭವಿಗಳಿಗೆ ನೀಡುವ ಅನುದಾನ ಎಷ್ಟು ; (ವಿವರ ನೀಡುವುದು)	ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಮನೆ ನಿರ್ಮಾಣಕ್ಕೆ ವಿವಿಧ ವಸತಿ ಯೋಜನೆಗಳಡಿ ಫಲಾನುಭವಿಗಳಿಗೆ ನೀಡಲಾಗುತ್ತಿರುವ ಪ್ರತಿ ಮನೆಗೆ ಹಾಗೂ ವರ್ಗದವರಿಗೆ ಬಿಡುಗಡೆ ಮಾಡುತ್ತಿರುವ ಯೋಜನಾವಾರು ಸಹಾಯಧನದ ವಿವರ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಯೋಜನೆ	ಗ್ರಾಮೀಣ	
		ಸಾಮಾನ್ಯ / ಅಲ್ಪ ಸಂಖ್ಯಾತರು	ಪ.ಜಾ/ ಪ.ಪಂಗಡ
1	ಬಸವ ವಸತಿ ಯೋಜನೆ (ಗ್ರಾಮೀಣ)	1.20	-
2	ಡಾ.ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ)	-	1.75
3	ದೇವರಾಜು ಅರಸು ವಸತಿ ಯೋಜನೆ (ಗ್ರಾಮೀಣ)	1.20	1.50
4	ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)*	1.20	1.75

** ಪ್ರಧಾನ ಮಂತ್ರಿ ಆವಾಸ್ (ಗ್ರಾಮೀಣ) ಯೋಜನೆಯಡಿ 60:40 ಅನುಪಾತದಂತೆ ಕೇಂದ್ರ ಸರ್ಕಾರದಿಂದ ರೂ.72,000/-ಗಳನ್ನು ಒದಗಿಸಲಾಗುತ್ತಿದ್ದು, ಇನ್ನುಳಿದ ರೂ.48,000/-ಗಳನ್ನು ರಾಜ್ಯ ಸರ್ಕಾರದಿಂದ ಒದಗಿಸಲಾಗುತ್ತಿದೆ. ರೂ.1,20,000/- ಸಹಾಯಧನ ನಿಗಧಿಪಡಿಸಿದ್ದು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಹೆಚ್ಚುವರಿಯಾಗಿ ರೂ.55,000/-ಗಳನ್ನು ರಾಜ್ಯ ಸರ್ಕಾರದಿಂದ ಒದಗಿಸಲಾಗುತ್ತಿದೆ.

ಕ್ರ. ಸಂ.	ಪ್ರಶ್ನೆ	ಉತ್ತರ
ಇ)	ಇತ್ತೀಚಿಗೆ ಬೆಲೆ ಏರಿಕೆಯಿಂದ ಕಟ್ಟಡದ ನಿರ್ಮಾಣದ ವೆಚ್ಚ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಫಲಾನುಭವಿಗಳು ಮನೆ ನಿರ್ಮಿಸಿ ಕೊಳ್ಳಲು ಸರ್ಕಾರದಿಂದ ಘಟಕ ವೆಚ್ಚ ನೀಡುತ್ತಿಲ್ಲ ಬದಲಾಗಿ ಸಹಾಯಧನ ಮಾತ್ರ ನೀಡಲಾಗುತ್ತಿದ್ದು, ಸರ್ಕಾರ ನೀಡುವ ಸಹಾಯಧನದೊಂದಿಗೆ ಫಲಾನುಭವಿಯು ತನ್ನ ಸ್ವಂತ ವಂತಿಕೆ ಹಣ ಉಪಯೋಗಿಸಿ ಕೊಂಡು ಮನೆ ನಿರ್ಮಿಸಿ ಕೊಳ್ಳಬೇಕಾಗಿರುತ್ತದೆ.
ಈ)	ಬಂದಿದ್ದಲ್ಲಿ, ಸರ್ಕಾರದ ನೀಡುವ ಅನುದಾನದ ಮೊತ್ತವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)	ರಾಜ್ಯ ಸರ್ಕಾರದಿಂದ ನೀಡುವ ಸಹಾಯಧನವನ್ನು ಪರಿಷ್ಕರಿಸುವ ಬಗ್ಗೆ ಸಂದರ್ಭಾನುಸಾರ ಪರಿಶೀಲಿಸಲಾಗುವುದು.
ಉ)	ಮಂಜೂರಾದ ಫಲಾನುಭವಿಗಳಿಗೆ ಕಳೆದ 2 ವರ್ಷಗಳಿಂದ ಹಂತವಾರು ಅನುದಾನ ಬಿಡುಗಡೆ ವಿಳಂಬವಾಗುತ್ತಿರುವುದನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು)	2019-20 ರಿಂದ ಈವರೆಗೆ ಸರ್ಕಾರದಿಂದ ರೂ.7131.85 ಕೋಟಿಗಳು ಬಿಡುಗಡೆ ಮಾಡಿದ್ದು, ಈ ಪೈಕಿ ಭೌತಿಕ ಪ್ರಗತಿಗನುಗುಣವಾಗಿ ಬಿ.ಎಲ್.ಸಿ. ಮತ್ತು ಎ.ಹೆಚ್.ಪಿ. ಘಟಕ ಸೇರಿ ಒಟ್ಟಾರೆಯಾಗಿ ರೂ.6,802.05 ಕೋಟಿಗಳನ್ನು ಬಿಡುಗಡೆ ಮಾಡಿದೆ. ಪ್ರತಿ ವಾರ ಭೌತಿಕ ಪ್ರಗತಿಗನುಗುಣವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ವಿವಿಧ ಯೋಜನೆಗಳಡಿ ಅನುದಾನ ದುರ್ಬಳಕೆಯನ್ನು ತಡೆಹಿಡಿಯುವ ಉದ್ದೇಶದಿಂದ ಸರ್ಕಾರದ ಆದೇಶ ಸಂಖ್ಯೆ: ವಇ 154 ಹೆಚ್‌ಎಹೆಚ್ 2019, ದಿನಾಂಕ:16.11.2019 ರಂತೆ ಮನೆಗಳ ಪ್ರಗತಿಯನ್ನು ಜಿಯೋ ಆಧಾರಿತ "ವಿಜಿಲ್ ಆಪ್" ಮೂಲಕ ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಮೂಲಕ ಪುನರ್ ಪರಿಶೀಲಿಸಿ, ಅರ್ಹ ಫಲಾನುಭವಿಗಳಿಗೆ ಅನುದಾನ ಬಿಡುಗಡೆಗೆ ಕ್ರಮವಹಿಸಲಾಗುತ್ತಿತ್ತು. ಸರ್ಕಾರದ ಆದೇಶ ಸಂಖ್ಯೆ:ವಇ 75 ಹೆಚ್‌ಎಹೆಚ್ 2021, ದಿನಾಂಕ:07.09.2021 ರಂತೆ ವಿಜಿಲ್ ಆಪ್ ಮೂಲಕ ಮನೆಗಳ ಪ್ರಗತಿಯನ್ನು ಪ್ರತ್ಯೇಕವಾಗಿ ಪರಿಶೀಲಿಸುವುದನ್ನು ಮತ್ತಷ್ಟು ಸರಳೀಕರಿಸಿ In-House ಮೂಲಕ ಅಭಿವೃದ್ಧಿಪಡಿಸಿರುವ "Indira-Vigil" ವೆಬ್ ಆ್ಯಪ್ ಮೂಲಕ ಪರಿಶೀಲಿಸಿದ ನಂತರ ಅನುದಾನ ಬಿಡುಗಡೆಗೆ ಅನುಮತಿ ನೀಡಲಾಗಿರುತ್ತದೆ. ಅದರಂತೆ ವಿವಿಧ ವಸತಿ ಯೋಜನೆಗಳಡಿ ಜಿಪಿಎಸ್ ಆಧಾರಿತ ಭೌತಿಕ ಪ್ರಗತಿಗೆ ಅನುಗುಣವಾಗಿ ಫಲಾನುಭವಿಗಳಿಗೆ ಯಾವುದೇ ವಿಳಂಬವಾಗದಂತೆ ಫಲಾನುಭವಿಗಳ ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆಗೆ ನೇರವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಭೌತಿಕ ಪ್ರಗತಿಗನುಗುಣವಾಗಿ ಆಧಾರ್ ಜೋಡಣೆಗೊಂಡ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಲು ಪ್ರಸ್ತುತ ಬಾಕಿ ಇರುವುದಿಲ್ಲ. ಕಳೆದ 2 ವರ್ಷಗಳಿಂದ ಈವರೆಗೆ ಭೌತಿಕ ಪ್ರಗತಿಗನುಗುಣವಾಗಿ ಬಿಡುಗಡೆ ಮಾಡಲಾದ ರೂ.6802.05 ಕೋಟಿಗಳ ಯೋಜನಾವಾರು ಮತ್ತು ವರ್ಷವಾರು ವಿವರ ಕೆಳಕಂಡಂತಿದೆ .

ಕ್ರ.ಸಂ.	ಪ್ರಶ್ನೆ	ಉತ್ತರ
		(ರೂ.ಕೋಟಿಗಳಲ್ಲಿ)

ಯೋಜನೆಗಳು	2019-20	2020-21	2021-22 (ಫೆಬ್ರವರಿ ಅಂತ್ಯಕ್ಕೆ)	ಒಟ್ಟು
ಬಸವ ವಸತಿ ಯೋಜನೆ	799.7	614.65	434.2	1848.55
ಡಾ. ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ	753.83	693.8	623.82	2071.45
ದೇವರಾಜ್ ಅರಸು ವಸತಿ ಯೋಜನೆ	44.36	44.7	76.34	165.4
ವಾಜಪೇಯಿ ನಗರ ವಸತಿ ಯೋಜನೆ	307.67	269.21	277.33	854.21
ರಾಜ್ಯ ಒಟ್ಟು	**1905.56**	**1622.36**	**1411.69**	**4939.61**
ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾ)	158.62	95.53	104.63	358.78
ಪ್ರಧಾನ ಮಂತ್ರಿ ಆವಾಸ್ ಯೋಜನೆ - ನಗರ	325.07	325.69	846.08	1496.84
ರಾಜೀವ್ ಆವಾಸ್ ಯೋಜನೆ	2.75	2.51	1.56	6.82
ಕೇಂದ್ರ ಒಟ್ಟು	**486.44**	**423.73**	**952.27**	**1862.44**
ರಾಜ್ಯ ಮತ್ತು ಕೇಂದ್ರ ಒಟ್ಟು	**2392.00**	**2046.09**	**2363.96**	**6802.05**

\ಸಂಖ್ಯೆ :ವಇ 150 ಹೆಚ್‌ಎಎಂ 2022

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು